ಕ)

| ಧಾನ್ಯ | ಮಾಲಿನ ಬೆಲೆ (ರೂ.ಲಕ್ಷಗಳಲ್ಲಿ) | ರೈತರಿಗೆ ಪಾವತಿಸಿರುವ ಹಣ (ಲಕ್ಷ ರೂ.ಗಳಲ್ಲಿ) |
|---|---|---|
| ಭತ್ತ | 59:06 | 59.06 |
| ರಾಗಿ | 700.46 | 694.46 |
| ಸಜ್ಜೆ | 200.90 | 200.90 |
| ಮೆಕ್ಕೆಜೋಳ | - | - |
| ಕಆನಾಸನಿನಿ | 11615.05 | 9529.20 |
| ಭಾ.ಆ.ನಿ. | 5411.38 | ವಿವರಗಳನ್ನು ಒದಗಿಸಿರುವುದಿಲ್ಲ |

ರೈತರಿಗೆ ಹಣ ತಲುಪಿದ ದಿನಾಂಕ ಹಾಗೂ ತಾಲ್ಲೂಕುವಾರು ವಿವರಗಳು ಸದ್ಯದಲ್ಲಿ ಲಭ್ಯವಿರುವುದಿಲ್ಲ. ಸದರಿ ವಿವರಗಳನ್ನು ಜಿಲ್ಲಾ ಕಛೇರಿಗಳಿಂದ ತರಿಸಿಕೊಂಡು ಒದಗಿಸಲಾಗುವುದು.

ಇ) ಕೇಂದ್ರ ಸರ್ಕಾರದಿಂದ : ಭಾರತ ಆಹಾರ ನಿಗಮದಿಂದ ಹಣ ನೀಡಲು ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ವತಿಯಿಂದ ಈಗಾಗಲೇ ರೂ.59.00 ಕೋಟಿಯನ್ನು ಆವರ್ತ ನಿಧಿಯಿಂದ ಬಿಡುಗಡೆ ಮಾಡಿದ್ದು, ಸದರಿ ಹಣವನ್ನು ರೈತರಿಗೆ ಈಗಾಗಲೇ ಪಾವತಿಸಿದ್ದು, ಸರ್ಕಾರದ ವತಿಯಿಂದ ಹಣ ನೀಡುವಲ್ಲಿ ಯಾವುದೇ ವಿಳಂಬವಾಗಿರುವುದಿಲ್ಲ. ಈ ಕಾರಣ ರೈತನಿಗೆ ಆಗಿರುವ ಹಾನಿಯನ್ನು ತುಂಬಿಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಭೂಮಿ ಕಳೆದುಕೊಂಡ ರೈತರ ಕುರಿತು.

1696(2179)

ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ(ಮುಂಡರಗಿ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಭೂಮಿ ಕಳೆದುಕೊಂಡ ರೈತರ ಎಷ್ಟು ಜನ

ಮಕ್ಕಳಿಗೆ ಉದ್ಯೋಗ ಕೊಡಲಾಗಿದೆ.

ಆ) ಮುಂಡರಗಿ ತಾಲ್ಲೂಕು ಕಲಿಕೇರಿ ಗ್ರಾಮದ ಶ್ರೀ ಎಂ.ಬಿ.ಪಾಟೀಲ್, ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ನೇಮಕಾತಿಗೊಂಡ ಬೆರಳಚ್ಚುಗಾರ ಎಸ್.ಜಿ.ಪರಾಂಡೆಯವರು ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಜಮೀನು ಕಳೆದುಕೊಂಡ ರೈತನ ಮಗನಿದ್ದು, ಆತನಿಗೆ ಸರ್ಕಾರದ ಅನುದಾನ ಬಿಡುಗಡೆ ಮಾಡಿಸುವುದಾಗಿ ಹಿಂದಿನ ಅಧಿವೇಶನದಲ್ಲಿ ಆಶ್ವಾಸನೆ ಕೊಟ್ಟಿದ್ದರು, ಆದರೆ ಇನ್ನೂ ಆತನ ವೇತನ ಅನುದಾನ ಬಿಡುಗಡೆಯಾಗಿಲ್ಲದಿರುವುದರಿಂದ, ಎಂದಿನಿಂದ ಅನುದಾನ ಬಿಡುಗಡೆ ಮಾಡಲಾಗುವುದು?

ಶ್ರೀ ಹೆಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಭೂಮಿ ಕಳೆದುಕೊಂಡ ರೈತ ಕುಟುಂಬದ ಒಟ್ಟು 88 ಅಭ್ಯರ್ಥಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ನೀರಾವರಿ ಯೋಜನೆಗಳಿಂದ ಬಾಧಿತರಾದ ಕುಟುಂಬದ ಸದಸ್ಯರಿಗೆ ಸರ್ಕಾರಿ ನೇಮಕಾತಿಗಳಲ್ಲಿ ಶೇ.5 ರಷ್ಟು ಹುದ್ದೆಗಳನ್ನು ಮೀಸಲಿಟ್ಟು ನಿಯಮಗಳನ್ನು ರಚಿಸಲಾಗಿದೆ. ಈ ನಿಯಮಗಳು ದಿನಾಂಕ:24-11-2000 ರಿಂದ ಜಾರಿಗೆ ಬಂದಿರುತ್ತದೆ.

ಆ) ಈ ಉಪ ಪ್ರಶ್ನೆಯು ಶಿಕ್ಷಣ ಇಲಾಖೆಗೆ ಸಂಬಂಧಿಸಿದೆ. ಆದ್ದರಿಂದ ಇದನ್ನು ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದೆ.

ಶಾಸಕರಿಗೆ 25 ಲಕ್ಷ ವಿವೇಚನಾ ಅನುದಾನ ಬಿಡುಗಡೆ.

1697(2180)

ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ(ಮುಂಡರಗಿ): ಮಾನ್ಯ ಮುಖ್ಯಮಂತ್ರಿಯವರನ್ನು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಾಸಕರಿಗೆ ರೂ.25 ಲಕ್ಷ ವಿವೇಚನಾ ಅನುದಾನ ಬಿಡುಗಡೆ ಮಾಡಲಾಗಿದೆಯೇ?

ಆ) ಮಾಡದಿದ್ದಲ್ಲಿ ಎಂದಿನಿಂದ ಬಿಡುಗಡೆ ಮಾಡಲಾಗುವುದು?

ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿ):